# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ

***ಸಿ.ಸಿ. ಸಂಖ್ಯೆ : 128/2016***

***ಚಾಸಾ : 5***

***ಪ್ರಾಸಾ : 2***

| | | |
|---|---|---|
| **ಹೆಸರು** | : | ಕೆ ಬಿ ರಾಮಕೃಷ್ಣ |
| **ತಂದೆ ಹೆಸರು** | : | ಕೆ ಬಾಲನಾಯರ್ |
| **ವಯಸ್ಸು** | : | 58 ವರ್ಷ |
| **ಉದ್ಯೋಗ** | : | ಮಾಜಿ ಸೈನಿಕ |
| **ವಾಸಸ್ಥಳ** | : | ನೆಲ್ಲಿಹುದಿಕೇರಿ ಗ್ರಾಮ |

***ದಿನಾಂಕ : 17-11-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

***ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ. ರವರಿಂದ.***

ಚಾಸಾ-1 ಹಾಗೂ 6 ರವರ ಪರಿಚಯವಿರುತ್ತದೆ. ಅವರು ನಮ್ಮ ಜೊತೆಯಲ್ಲಿ ಕೆಲಸ ಮಾಡುತ್ತಿದ್ದರು. ದಿನಾಂಕ 07-01-2015 ರಂದು ಪೋಲಿಸರು ನಮ್ಮ ಆರೇಂಜ್ ಕೌಂಟಿ ರೆಸಾರ್ಟ್ ಗೆ ಬಂದಿದ್ದು, ಕಳ್ಳತನವಾದ ಮೂರು ರೂಮಗಳನ್ನು ಪರಿಶೀಲಿಸಿ ಬರವಣಿಗೆ ಮಾಡಿರುತ್ತಾರೆ. ಸಾಕ್ಷಿಗೆ ನಿಪಿ 2 ರಿಂದ 4ನ್ನು ತೋರಿಸಲಾಗಿ, ಸಾಕ್ಷಿಯು ಅವುಗಳು ಪೊಲೀಸರು ರೆಸಾರ್ಟ್ ನಲ್ಲಿ ಬರೆದ ಬರವಣಿಗೆ ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಗಳನ್ನು ನಿಪಿ 2ಬಿ, 3ಬಿ ಹಾಗೂ 4ಬಿ ಎಂದು ಗುರುತಿಸಲಾಯಿತು.

***ಪಾಟೀ ಸವಾಲು : ಶ್ರೀ ಸಿ ಕೆ ಪಿ 2 ರಿಂದ 4ನೇ ಆರೋಪಿಗಳ ಪರ ವಕೀಲರಿಂದ***

ನಾನು ಆರೇಂಜ್ ಕೌಂಟಿ ರೆಸಾರ್ಟ್ ನಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ಅಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ಪೋಲಿಸರಿಗೆ ಯಾವುದೇ ದಾಖಲೆಯನ್ನು ನೀಡಿರುವುದಿಲ್ಲ. ಸದರಿ ರೆಸಾರ್ಟ್ ನ ಮಾಲೀಕರ ಹೆಸರು ಇಮಾಲಿನ್ ಟಿ ರಾಮಪುರಂ ಎಂಬುದಾಗಿರುತ್ತದೆ. ಸದರಿ ರೆಸಾರ್ಟ್ ನ ಉಸ್ತುವಾರಿಯನ್ನು ಆಗ ಕಾಂತಿ ಎನ್ನುವವರು ನೋಡಿಕೊಳ್ಳುತ್ತಿದ್ದರು. ಪೋಲಿಸರು ಮಹಜರಿಗೆ ಸಾಕ್ಷಿಯಾಗಿ ಬರುವಂತೆ ನನಗೆ ಯಾವುದೇ ನೋಟಿಸ್ ನ್ನು ನೀಡಿರುವುದಿಲ್ಲ. ಅದೇ ರೀತಿ ನಮ್ಮ ಮಾಲೀಕರು ಸಹ ಮಹಜರಿಗೆ ಬರುವಂತೆ ತಿಳಿಸಿರುವುದಿಲ್ಲ. ಸದರಿ ರೆಸಾರ್ಟ್ ನ ಮೂರು ರೂಮುಗಳಲ್ಲಿ ಕಳ್ಳತನವಾಗಿರುತ್ತದೆ.

ಮೂರು ರೂಮುಗಳು ಸಹ ಒಟ್ಟಿಗೆ ಇರದೆ ದೂರ ದೂರವಿದ್ದ, ಸುಮಾರು 100 ಮೀಟರ್ ದೂರದಲ್ಲಿರುತ್ತವೆ. ನಾನು ಮಹಜರಿಗೆ ಸಾಕ್ಷಿಯಾಗಿ ಪೋಲಿಸರ ಜೊತೆ ಹೋಗಿರುತ್ತೇನೆ. ಕಳ್ಳತನವಾದ ರೂಮುಗಳನ್ನು ನಾನು ನೋಡಿರುವುದಿಲ್ಲ. ಮಹಜರಿನ ಸಮಯದಲ್ಲಿ ನಮ್ಮ ರೆಸಾರ್ಟ್ ನ ವ್ಯವಸ್ಥಾಪಕರು ಬಂದಿರುತ್ತಾರೆ. ಸದರಿ ವ್ಯವಸ್ಥಾಕರಿಗೆ ನಮ್ಮ ರೆಸಾರ್ಟ್ ನಲ್ಲಿ ಪ್ರತ್ಯೇಕ ಕೊಠಡಿ ಇರುತ್ತದೆ. ಪೋಲಿಸರು ಬರವಣಿಗೆಯನ್ನು ವ್ಯವಸ್ಥಾಪಕರ ಕೊಠಡಿಯಲ್ಲಿ ಬರೆದಿರುತ್ತಾರೆ ಎಂದರೆ ಸರಿ. ಸದರಿ ಬರವಣಿಗೆಯನ್ನು ನಮ್ಮ ಸಮಕ್ಷಮದಲ್ಲಿ ಮಾಡಿರುತ್ತಾರೆ. ಸದರಿ ಮಹಜರಗಳನ್ನು ಆಯಾಯ ಕೋಣೆಯಲ್ಲಿಯೇ ಬರೆದಿರುತ್ತಾರೆ. ರೂಮು ಸಂಖ್ಯೆ 507 ರಲ್ಲಿ ಯಾವುದೇ ಡ್ಯಾಮೇಜ್ ಆಗಿರುವುದಿಲ್ಲ. ರೂಮು ಸಂಖ್ಯೆ 408 ರಲ್ಲಿ ಎಕ್ಸಾಟ್ ಫ್ಯಾನ್ ನ್ನು ಬಿಚ್ಚಿ ಅದರ ಮೂಲಕ ಬಾಗಿಲಿನ ಲಾಕ್ ನ್ನು ತೆಗೆದಿರುತ್ತಾರೆ. ರೂಮು ಸಂಖ್ಯೆ 302 ರಲ್ಲಿ ಬಾಲ್ಕನಿಯಿಂದ ಬಾಗಿಲಿನ ಬೋಲ್ಟ್ ನ್ನು ತೆಗೆಯಲಾಯಿತು. ಸದರಿ ಮೂರು ರೂಮುಗಳು ನೆಲಮಹಡಿಯಲ್ಲಿರುತ್ತದೆ. ನಮ್ಮ ರೆಸಾರ್ಟ್ ನಲ್ಲಿ ಸಿಸಿ ಟಿವಿ ಇರುತ್ತದೆ. ನಮ್ಮ ರೆಸಾರ್ಟ್ ನಲ್ಲಿ ಎಲ್ಲಾ ಕಡೆಯು ಸೆಕ್ಯೂರಿಟಿ ಇರುತ್ತಾರೆ. ಪೋಲಿಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ವಶಕ್ಕೆ ಪಡೆದುಕೊಂಡಿರುವುದಿಲ್ಲ.

ಸದರಿ ರೂಮುಗಳ ಚೆಕ್ ಬಂಧಿಯನ್ನು ನನಗೆ ಸರಿಯಾಗಿ ಹೇಳಲು ಬರುವುದಿಲ್ಲ. ಪೋಲಿಸರು ಬರೆದ ಬರವಣಿಗೆಯನ್ನು ನಾನು ಓದಿರುತ್ತೇನೆ. ಸದರಿ ಮಹಜರ ಕ್ರಮ ಬರೆಯುವಾಗ ನನ್ನ ಜೊತೆ ನಮ್ಮ ರೆಸಾರ್ಟ್ ನ ಸಿಬ್ಬಂದಿಯಾದ ಸುಬ್ಬಯ್ಯ ಸಹ ಇದ್ದಿದ್ದರು. ನಮ್ಮ ರೆಸಾರ್ಟ್ ನ ಸಿಬ್ಬಂದಿಗಳನ್ನು ಹೊರತುಪಡಿಸಿ ಬೇರೆ ಯಾವುದೇ ಹೊರಗಿನ ವ್ಯಕ್ತಿ ಮಹಜರ ಬರೆಯುವ ಸಮಯದಲ್ಲಿ ಇದ್ದಿರಲಿಲ್ಲ. ರೂಮು ನಂ. 408 ರ ಮಹಜರನ್ನು ಮಧ್ಯಾಹ್ನ 1 ರಿಂದ 2 ಗಂಟೆಯವರೆಗೆ, ರೂಮು ನಂ. 507 ರ ಮಹಜರನ್ನು ಮಧ್ಯಾಹ್ನ 2.10 ರಿಂದ 3 ಗಂಟೆಯವರೆಗೆ ಹಾಗೂ ರೂಮು ನಂ. 302 ರ ಮಹಜರನ್ನು ಮಧ್ಯಾಹ್ನ 3 ರಿಂದ 4 ಗಂಟೆಯವರೆಗೆ ಬರೆದಿರುತ್ತಾರೆ. ಸದರಿ ಮಹಜರಗಳಲ್ಲಿ ನನ್ನ ಸಹಿಯ ಕೆಳಗಡೆ ನನ್ನ ಹೆಸರು ಹಾಗೂ ವಿಳಾಸವನ್ನು ಬರೆದಿರುವುದಿಲ್ಲ. ಪೋಲಿಸರು ನನ್ನನ್ನು ಠಾಣೆಗೆ ಕರೆಸಿರುವುದಿಲ್ಲ. ಮಹಜರ ಬರೆದ ಪೋಲಿಸ್ ಸಿಬ್ಬಂದಿಯ ಹೆಸರನ್ನು ಹೇಳಲು ಬರುವುದಿಲ್ಲ. ಮೂರು ಮಹಜರಗಳನ್ನು ಯಾವ ಪೋಲಿಸ್ ಬರೆದಿರುತ್ತಾರೆಂದು ನಾನು ನೋಡಿರುವುದಿಲ್ಲ.

ನಿಪಿ 2 ರಿಂದ 4 ಮಹಜರಗಳನ್ನು ನಮ್ಮ ರೆಸಾರ್ಟ್ ನಲ್ಲಿ ಬರೆದಿರುವುದಿಲ್ಲ ಬದಲಾಗಿ ಪೋಲಿಸರು ಠಾಣೆಯಲ್ಲೆ ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಮಾಲೀಕರಿಗೆ ಸಹಾಯ ಮಾಡುವ ಉದ್ದೇಶದಿಂದ ಪೋಲಿಸರು ಸದರಿ ಮಹಜರಗಳನ್ನು ರೆಸಾರ್ಟ್ ನಲ್ಲಿ ಬರೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಳುವಾದ ವಿಚಾರದ ಹೊರತಾಗಿ ಬೇರೆ ಯಾವುದೇ ವಿಚಾರ ನನಗೆ ಗೊತ್ತಿರುವುದಿಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ.

ಓ. ಹೇ. ಕೇ. ಸ. ಇದೆ.

ಸಹಿ/-

**(ಸಂತೋಷ ಕೊಠಾರಿ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ವಿರಾಜಪೇಟೆ.

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ

***ಸಿ.ಸಿ. ಸಂಖ್ಯೆ ಃ 128/2016***

***ಚಾಸಾ ಃ 6***

***ಪ್ರಾಸಾ ಃ 3***

| | | |
|---|---|---|
| **ಹೆಸರು** | ಃ | ಎ ಡಿ ಸುಬ್ಬಯ್ಯ |
| **ತಂದೆ ಹೆಸರು** | ಃ | ಎ ಎ ದೇವಯ್ಯ |
| **ವಯಸ್ಸು** | ಃ | 43 ವರ್ಷ |
| **ಉದ್ಯೋಗ** | ಃ | ಸೂಪರ್ ವೈಸರ್ ಆರೇಂಜ್ ಕೌಂಟಿ ರೆಸಾರ್ಟ್ ಕರಡಿಗೋಡು ಗ್ರಾಮ |
| **ವಾಸಸ್ಥಳ** | ಃ | ಸಿದ್ದಾಪುರ |

***ದಿನಾಂಕ ಃ 17-11-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.***

***ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದ.***

ಚಾಸಾ-1 ಹಾಗೂ 4 ರವರ ಪರಿಚಯವಿರುತ್ತದೆ. ಅವರು ನಮ್ಮ ಜೊತೆಯಲ್ಲಿ ಕೆಲಸ ಮಾಡುತ್ತಾರೆ. ದಿನಾಂಕ 06-01-2015 ರಂದು ಕಳ್ಳತನವಾದ ವಿಚಾರ ನಮಗೆ ಮರುದಿನ ಬೆಳಿಗ್ಗೆ ಗೊತ್ತಾಗಿದ್ದು, ದಿನಾಂಕ 07-01-2015 ರಂದು ಪೋಲಿಸರು ನಮ್ಮ ಆರೇಂಜ್ ಕೌಂಟಿ ರೆಸಾರ್ಟ್ ಗೆ ಬಂದು ಅಲ್ಲಿ ವಿಚಾರಣೆ ಮಾಡಿ ಕಳ್ಳತನವಾದ ಮೂರು ರೂಮಗಳನ್ನು ಪರಿಶೀಲಿಸಿ ಮಹಜರ ಕ್ರಮಜರುಗಿಸಿರುತ್ತಾರೆ. ಸಾಕ್ಷಿಗೆ ನಿಪಿ 2 ರಿಂದ 4ನ್ನು ತೋರಿಸಲಾಗಿ, ಸಾಕ್ಷಿಯು ಅವುಗಳು ಪೊಲೀಸರು ರೆಸಾರ್ಟ್ ನಲ್ಲಿ ಬರೆದ ಬರವಣಿಗೆ ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಗಳನ್ನು ನಿಪಿ 2ಸಿ, 3ಸಿ ಹಾಗೂ 4ಸಿ ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರ್ಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು.)**

**ಪಾಟೀ ಸವಾಲು ಶ್ರೀ. ಸರ್ಕಾರಿ ವಕೀಲರಿಂದಃ-**

ಚಾಸಾ-1 ರವರು ನಮ್ಮ ರೆಸಾರ್ಟ್ ನ ಮ್ಯಾನೇಜರ್ ಆಗಿರುತ್ತಾರೆ ಎಂದರೆ ಸರಿ. ಪೋಲಿಸರು ಮಹಜರ ಕ್ರಮಕ್ಕೆ ಬಂದಾಗ ಚಾಸಾ-1 ರವರೇ ಅವರಿಗೆ ಕಳ್ಳತನವಾದ ಮೂರು ರೂಮುಗಳನ್ನು ತೋರಿಸಿರುತ್ತಾರೆ ಎಂದರೆ ಸರಿ.

***<u>ಪಾಟೀ ಸವಾಲು : ಶ್ರೀ ಸಿ ಕೆ ಪಿ 2 ರಿಂದ 4ನೇ ಆರೋಪಿಗಳ ಪರ ವಕೀಲರಿಂದ</u>***

ನಾನು ಆರೇಂಜ್ ಕೌಂಟಿ ರೆಸಾರ್ಟ್ ನಲ್ಲಿ ಫ್ರಂಟ್ ಆಫೀಸ್ ನಲ್ಲಿ ಸೂಪರ್ ವೈಸರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಅಲ್ಲಿ ಕೆಲಸ ಮಾಡುತ್ತಿದ್ದ ಬಗ್ಗೆ ಪೋಲಿಸರಿಗೆ ಯಾವುದೇ ದಾಖಲೆಯನ್ನು ನೀಡಿರುವುದಿಲ್ಲ. ಸದರಿ ರೆಸಾರ್ಟ್ ನ ಮಾಲೀಕರ ಹೆಸರು ಜಾರ್ಜ್ ಎಂಬುದಾಗಿರುತ್ತದೆ. ಕಳ್ಳತನವಾದ ವಿಚಾರವನ್ನು ನಮ್ಮ ಮಾಲೀಕರಿಗೆ ಚಾಸಾ-1 ರವರು ತಿಳಿಸಿರುತ್ತಾರೆ. ಕಳ್ಳತನವಾದ ರೂಮುಗಳಲ್ಲಿ ಗೆಸ್ಟ್ ಇದ್ದಿರುತ್ತಾರೆ. ಆ ರೀತಿ ಕಳ್ಳತನವಾದ ಮೇಲೆ ಅದನ್ನು ನೋಡಲು ಚಾಸಾ1 ರವರು ಹೋಗಿರುತ್ತಾರೆ. ಆ ಸಮಯದಲ್ಲಿ ಬಿದ್ದಪ್ಪ ರವರ ಜೊತೆ ನಾನು ಹೋಗಿರುವುದಿಲ್ಲ. ಮೂರು ರೂಮುಗಳು ಸಹ ಒಟ್ಟಿಗೆ ಇರದೆ ದೂರ ದೂರವಿದ್ದು, ಸುಮಾರು 100 ರಿಂದ 200 ಅಡಿ ದೂರದಲ್ಲಿರುತ್ತವೆ. ಪೋಲಿಸರು ಮಹಜರಿಗೆ ಬರುವಂತೆ ನನಗೆ ಯಾವುದೇ ನೋಟಿಸ್ ನೀಡಿರುವುದಿಲ್ಲ. ಮಹಜರಿನ ಸಮಯದಲ್ಲಿ ನನ್ನನ್ನು ಹೊರತು ಪಡಿಸಿ ಸುಮಾರು ಏಳೆಂಟು ಜನ ನಮ್ಮ ಸಿಬ್ಬಂದಿಗಳಿದ್ದರು. ಮಹಜರಿನ ಸಮಯದಲ್ಲಿ ನಮ್ಮ ಮಾಲೀಕರನ್ನು ಪೋಲಿಸರು ಕರೆಸಿರುವುದಿಲ್ಲ. ನಮ್ಮ ವ್ಯವಸ್ಥಾಕರಿಗೆ ನಮ್ಮ ರೆಸಾರ್ಟ್ ನಲ್ಲಿ ಪ್ರತ್ಯೇಕ ಕೊಠಡಿ ಇರುತ್ತದೆ. ಮಹಜರಗಳನ್ನು ಕಳ್ಳತನವಾದ ಮೂರು ರೂಮುಗಳಲ್ಲಿ ಬರೆದಿರುತ್ತಾರೆ. ಸದರಿ ಮಹಜರನ್ನು ಮೂರು ಜನ ಪೋಲಿಸರು ಪ್ರತ್ಯೇಕವಾಗಿ ಬರೆದಿರುತ್ತಾರೆ. ಸದರಿ ಮಹಜರಗಳನ್ನು ಅವರು ಬೇರೆ ಬೇರೆ ಸಮಯದಲ್ಲಿ ಬರೆದಿರುತ್ತಾರೆ.

ಸದರಿ ಮಹಜರಳನ್ನು ಒಬ್ಬರೇ ವ್ಯಕ್ತಿ ಬರೆದಿರುವ ಹಾಗೆ ಇದೆ ಎಂದರೆ ಸಾಕ್ಷಿಯು ಸಹಿ ಮಾಡಲು ಮಾತ್ರ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮಹಜರುಗಳಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ. ನಾನು ಸದರಿ ಮಹಜರಗಳಲ್ಲಿ 3 ನೇ ಸಾಕ್ಷಿದಾರರನಾಗಿ ಸಹಿ ಮಾಡಿರುತ್ತೇನೆ. ಸದರಿ ಮಹಜರಗಳಲ್ಲಿ ನನ್ನ ಸಹಿಯ ಕೆಳಗಡೆ ನನ್ನ ಹೆಸರು ಹಾಗೂ ವಿಳಾಸವನ್ನು ಬರೆದಿರುವುದಿಲ್ಲ. ಮಹಜರ ಬರೆದ

ಮೇಲೆ ಪೋಲಿಸರು ಬೇರೆ ಯಾವುದೇ ಕ್ರಮಜರುಗಿಸಿರುವುದಿಲ್ಲ. ಪೋಲಿಸರು ನಮ್ಮನ್ನು ಠಾಣೆಗೆ ಕರೆಸಿರವುದಿಲ್ಲ. ಚಾಸಾ-1 ರವರು ಸಹಿ ಮಾಡುವಂತೆ ಹೇಳಿದ ಮೇರೆಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿಪಿ 2 ರಿಂದ 4 ಮಹಜರಗಳನ್ನು ನಮ್ಮ ರೆಸಾರ್ಟ್ ನಲ್ಲಿ ಬರೆದಿರುವುದಿಲ್ಲ ಬದಲಾಗಿ ಪೋಲಿಸರು ಠಾಣೆಯಲ್ಲೆ ಬರೆದಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಮಾಲೀಕರಿಗೆ ಸಹಾಯ ಮಾಡುವ ಉದ್ದೇಶದಿಂದ ಪೋಲಿಸರು ಸದರಿ ಮಹಜರಗಳನ್ನು ರೆಸಾರ್ಟ್ ನಲ್ಲಿ ಬರೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿದೆ.

ಓ. ಹೇ. ಕೇ. ಸ. ಇದೆ.

ಸಹಿ/-

**(ಸಂತೋಷ ಕೊಠಾರಿ)**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ. ವಿರಾಜಪೇಟೆ.